ಸಾಕ್ಷಿಯನ್ನು ದಿ: 26.06.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಡಿ.ಡಬ್ಲ್ಯೂ-1

**ಪಾಟೀಸವಾಲುಃ- ವಾದಿಗಳ ಪರ ವಕೀಲರಿಂದ:-**

1. ನಿಡಿ.3 ರಲ್ಲಿ ಪುಟ್ಟಸ್ವಾಮಾಚಾರಿ ಎಂದು ಕಾಣಿಸಿಲ್ಲ ಎಂದರೆ ಸರಿ. ವಾದಿಯು ನನ್ನ ಹಾಗೂ ಮುಕುಂದರಾವ್ ರವರ ವಿರುದ್ಧ ಡಿ.ಸಿ ನ್ಯಾಯಾಲಯದಲ್ಲಿ ಆರ್.ಪಿ 120/2011 ಹಾಗೂ 3/2011 ರಂತೆ ಅರ್ಜಿಗಳನ್ನು ಸಲ್ಲಿಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮುಕುಂದರಾವ್ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಹಾಗೂ ಸದರಿ ಮುಕುಂದರಾವ್ ರವರ ಪ್ರಕರಣ ಒಂದೇ ದಿನ ನಡೆಯುತ್ತಿತ್ತು ಎಂದರೆ ಸರಿ.
2. ಮುಕುಂದರಾವ್ ರವರು ತಮ್ಮ ತಕರಾರಿನಲ್ಲಿ ಏನು ಬರೆಸಿದ್ದಾರೆಂದು ನನಗೆ ಗೊತ್ತಿಲ್ಲ. ಸದರಿ ತಕರಾರಿನ ಬಗ್ಗೆ ತಿಳಿದುಕೊಂಡಿದ್ದರೂ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿಡಿ.3 ಸೃಷ್ಟಿಸಲಾದ ದಾಖಲೆ ಎಂದರೆ ಸರಿಯಲ್ಲ. ವಾದಿಯರಿಗೆ ಸಂಬಂಧಿಸಿದ ಆಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸದರಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆಂದರೆ ಸರಿಯಲ್ಲ. ಸದರಿ ಪತ್ರವನ್ನು ವಾದಿಯ ತಂದೆ ಪುಟ್ಟಸ್ವಾಮಾಚಾರಿ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೂ ನಮಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.
3. ನಿಡಿ.5 ರಲ್ಲಿ ತೋರಿಸಿರುವ ಆಸ್ತಿಯ ವಿಸ್ತೀರ್ಣ 11 ಗುಂಟೆ ಇದೆ ಎಂದರೆ ಸರಿ. ಸದರಿ ಜಮೀನನ್ನು ಚಿಕ್ಕರಾಚಚಾರಿರವರು ಪುಟ್ಟರಾಚಚಾರಿಯವರಿಗೆ ಬರೆದು ಕೊಟ್ಟಿರುತ್ತಾರೆ. ಸದರಿ ಪುಟ್ಟರಾಚಚಾರಿಯವರು ಹಳ್ಳವನ್ನು ಸೇರಿಸಿಕೊಂಡು ಪಹಣಿ ಪತ್ರಿಕೆಯಲ್ಲಿ 19 ½ ಗುಂಟೆ ಎಂದು ಕಾಣಿಸಿದ್ದರು. ಸದರಿ ಜಮೀನು ಈಗ ಪುಟ್ಟರಾಚಚಾರಿಯವರ ಮಗ ಚಂದ್ರಶೇಖರ್ ರವರ ಹೆಸರಿನಲ್ಲಿದೆ. ನಿಡಿ.87 ರ ಪ್ರಕಾರ ನಾಗಮ್ಮ ಕೋಂ ಪುಟ್ಟರಾಚಚಾರಿ ರವರ ಹೆಸರಿನಲ್ಲಿ 5.08 ಗುಂಟೆ ಹಾಗೂ 14.00 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ವಿಸ್ತೀರ್ಣದ ಜಮೀನುಗಳಿಗೆ ಸಂಬಂಧಿಸಿದಂತೆ ಕ್ರಯ ಪತ್ರ ಹಾಜರುಪಡಿಸಿರುವುದಿಲ್ಲ. ನಿಡಿ.5 ದಾಖಲೆಯನ್ನ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ವಾದಿಯರಿಗೆ ಸಂಬಂಧಿಸಿದ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸದರಿ ದಾಖಲೆಯನ್ನು ಹಾಜರು ಪಡಿಸಿದ್ದೇನೆಂದರೆ ಸರಿಯಲ್ಲ.

4. 11 ಗುಂಟೆ ವಿಸ್ತೀರ್ಣದ ಜಮೀನು 5 ½ ಗುಂಟೆ ಹಾಗೂ 14 ಗುಂಟೆ ಯಾವ ರೀತಿಯಾಗಿದೆ ಎಂದು ತೋರಿಸಲು ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಡಿ.87 ಹಾಗೂ ನಿಡಿ.5 ರಲ್ಲಿ ತೋರಿಸಿರುವ ವಿಸ್ತೀರ್ಣದಲ್ಲಿ ವ್ಯತ್ಯಾಸವಿದೆ ಎಂದರೆ ಸರಿಯಲ್ಲ. ನಿಡಿ.5 ಕ್ರಯಪತ್ರವನ್ನು ವಾದಿಯ ತಂದೆ ಅಥವಾ ಅವರ ಪೂರ್ವಜರು ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಸದರಿ ಆಸ್ತಿಗೆ ಸಂಬಂಧಿಸಿ ನಮಗೆ ಅಥವಾ ಬೇರೆ ಪ್ರತಿವಾದಿಯರಿಗೆ ಯಾವುದೇ ಹಕ್ಕಿಲ್ಲ ಎಂದರೆ ಸರಿಯಲ್ಲ.

5. ದಿಃ 05.08.1964 ರಂದು ನಿಡಿ.8 ರ ಕ್ರಯಪತ್ರವನ್ನು ಬರೆದುಕೊಟ್ಟಿರುತ್ತಾರೆಂದರೆ ಸರಿ. ಸದರಿ ಪತ್ರದಲ್ಲಿ ಜಮೀನಿನ ವಿಸ್ತೀರ್ಣವನ್ನು 11 ಗುಂಟೆ ಎಂದು ಕಾಣಿಸಲಾಗಿದೆ. ಸದರಿ ಆಸ್ತಿಯನ್ನು ಖರೀದಿ ಮಾಡಿದ ನಂತರ ದಿಃ 27.05.1981 ರಂದು ಲಿಂಗಣ್ಣಚಾರಿಯವರು ಯಶೋಧಮ್ಮರವರಿಗೆ ನಿಡಿ.7 ರಂತೆ 19 ½ ಗುಂಟೆ ಜಮೀನು ಬರೆದುಕೊಟ್ಟಿರುತ್ತಾರೆಂದರೆ ಸರಿ. ನಿಡಿ.8 ರಲ್ಲಿನ 11 ಗುಂಟೆ ಜಮೀನನ್ನು ನಿಡಿ.7 ರಲ್ಲಿ ಯಾವ ರೀತಿ 19 ½ ಗುಂಟೆ ಎಂದು ಕಾಣಿಸಲಾಗಿದೆ ಎಂದರೆ ಸಾಕ್ಷಿಯು 11 ಗುಂಟೆ ಹೊರತು ಪಡಿಸಿ ಉಳಿದ ಜಮೀನು ಖರಾಬು ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಿಸಿ ಯಾವುದೇ ದಾಖಲಾತಿ ಇರುವುದಿಲ್ಲ ಆದರೆ ಪಹಣಿ ಪತ್ರಿಕೆ ಇರುತ್ತದೆ. ವಾದಿಯರಿಗೆ ಸಂಬಂಧಿಸಿದ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ನಿಡಿ.7 ಮತ್ತು 8 ರ ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ